ಸ್ವಲ್ಪ ಅಸಹ್ಯವೇ. ಈಗಂತೂ ಬಂದವರೆಲ್ಲಾ ಅಮೃತ ಮಹಲನ್ನು ಹೊಗಳುತ್ತಿರುವಾಗ, ಈ ತ್ಯಾಜ್ಯವೊಂದನ್ನು ದೃಷ್ಟಿಬೊಟ್ಟಿನಂತೆ ಇಟ್ಟುಕೊಳ್ಳಲಾದೀತೆ? ಕಾರು ನಿಲ್ಲಿಸಲು ಒಂದು ಪಕ್ಕದಲ್ಲಿ ಆಗದಿದ್ದರೆ ಇನ್ನೊಂದು ಪಕ್ಕದಲ್ಲಿ ವ್ಯವಸ್ಥೆ ಮಾಡಿಸುತ್ತಿದ್ದರೇನೋ. ಆದರೆ ಇನ್ನೊಂದು ಪಕ್ಕದಲ್ಲಿ ಇದ್ದಿದ್ದು ಅನ್ನಿಬಾಯಿಯ ಮನೆ. ವಿಶೇಷವೆಂದರೆ ಅವಳ ನಿಜ ಹೆಸರನ್ನು ಯಾರೂ ತಿಳಿಯದಿದ್ದರೂ ಎಲ್ಲರೂ ತಿಳಿದವರಂತೆಯೇ ಮಾತಾಡುತ್ತಾರೆ! ಕೆಲವರು ಅವಳನ್ನು 'ಅನಿತಾ' ಎಂದರೆ, 'ಛೇ! ಅವಳು ಆ್ಯನಿ' ಎನ್ನುವವರಿದ್ದಾರೆ. 'ಅದ್ಯಾವುದೂ ಅಲ್ಲ, ಅವಳ ನಿಜನಾಮ ಅಮೀನಾ' ಎಂದವರೂ ಉಂಟು. ಒಟ್ಟಾರೆ ಅವಳೊಬ್ಬಳು ಜಾತ್ಯತೀತ ವ್ಯಕ್ತಿಯಾಗಿ ಕೆಲವು ಕಾಲ ಅಲ್ಲಿ ಬದುಕಿದ್ದು, ಈಗ ನಾಸಿಕದ ಕಡೆಗೆಲ್ಲೋ ಇದ್ದಳು. ಹದಿನೈದಿಪ್ಪತ್ತು ಗುಂಟೆಯ ದೊಡ್ಡ ಕಾಂಪೌಂಡಿನಲ್ಲಿ ಹಳೆಯ ಕಾಲದ ಒಪ್ಪವಾದ ಹಂಚಿನ ಮನೆಯನ್ನು ಈಗಲೂ ಅವಳು ಇರಿಸಿಕೊಂಡಿದ್ದಳು. ಈಗ ಅವಳ ಮನೆಯಲ್ಲಿ ವಾರಕ್ಕೊಮ್ಮೆ ಸ್ತ್ರೀಶಕ್ತಿ ಸಂಘದ ಮೀಟಿಂಗು ನಡೆಯುವುದು ಬಿಟ್ಟರೆ ಬೇರೇನೂ ಉಪಯೋಗಕ್ಕಿಲ್ಲ. ಅವಳದನ್ನು ಮಾರುತ್ತಾಳೆಯೇ ಎಂದು ಊರಿನ ಹಲವರು ವಿಚಾರಿಸಿದ್ದರು. ಮಾರ್ಬಲ ರಾಯರೂ ಆಸಕ್ತಿ ತೋರಿದವರೇ. ಆದರೆ ಯಾವ ಕಾರಣಕ್ಕೋ, ಊರಿನ ನಂಟು ಕಡಿದುಕೊಳ್ಳಲು ಇಚ್ಛಿಸದ ಆಕೆ ಮನೆಯನ್ನು ಹಾಗೆಯೇ ಇರಿಸಿಕೊಂಡಿದ್ದರಿಂದ, ಅದನ್ನಾದರೂ ಪಾರ್ಕಿಂಗ್ ವ್ಯವಸ್ಥೆಗೆ ಬಾಡಿಗೆ ಪಡೆಯುವ ಹಂಚಿಕೆ ರಾಯರಲ್ಲಿತ್ತು. ಆದರೆ ತಮ್ಮ ಹಳೆಯ 'ಸ್ನೇಹ–ಸಲುಗೆ' ನೆನಪಿಸಿದ ಅನ್ನಿಬಾಯಿ, ಅವರ ಬಾಯಿಗೆ ಬೀಗ ಜಡಿದಿದ್ದಳು. ಇದೇ ನೆವದಲ್ಲಿ ಅನ್ನಿಬಾಯಿಯ ಜೊತೆಗೆ ಒಂದೆರಡು ಬಾರಿ ಮಾತಾಡಿದ ಸಮಾಧಾನ ಬಿಟ್ಟರೆ, ಊರಿನಲ್ಲಿ ರಾಯರಿಗೆ ಮುಖಭಂಗವೇ ಆಗಿತ್ತು. ಈ ಕೋಪವನ್ನು ಅವರು ಹೊರಹಾಕಿದ್ದು ಗಂಗಕ್ಕನ ಮೇಲೆ.

"ಏ ಗಂಗಕ್ಕ! ಮನೆಮಂದಿ ಜೊತೀಗೇ ಇರಲಾರದೆ ಓಡಿ ಬಂದವ್ಳು ನೀನು. ಈಗ ಇಲ್ಲೂ ನಂಬ್ರ ತೆಗೀತ್ಯನೇ ಹಡ್ಬೆರಂಡೆ! ಕೇಳಿದ್ ಕೊಟ್ರೆ ಸಮಾ ಆತು. ಇಲ್ಲದಿದ್ರೆ ನಿಂಗೆ ಉಳಿಗಾಲಿಲ್ಲೆ. ಪ್ರಮೀಳೆ ರಾಜ್ಯದಲ್ಲಿ ಎಲ್ಲಾರ ತಲೆಯೂ ಹಾಳು" ಎಂದೆಲ್ಲಾ ಕೂಗಾಡುತ್ತಾ ಗಂಗಕ್ಕನ ಅಂಗಳಕ್ಕೆ ದಾಪುಗಾಲಿಟ್ಟ ಮಾರ್ಬಲ ರಾಯರು, ಅಂಗಳದಲ್ಲಿ ಒಣಗಿಸಿದ್ದ ಹಪ್ಪಳ–ಸಂಡಿಗೆಗಳನ್ನೆಲ್ಲಾ ಚೆಲ್ಲಾಡಿ ಕೂಗಾಡಿದ್ದರು. ಇವರ ಘೋರಾವತಾರ ಕಂಡು ಕಂಗಾಲಾದ ತುಂಗಾಭವಾನಿ ಮಗುವನ್ನವಚಿಕೊಂಡು ಅಳಲಾರಂಭಿದಳು. ಅನ್ನಕ್ಕೆ ಎಸರಿಡಲೆಂದು ಮಡಿನೀರು ಸೇದುತ್ತಿದ್ದ ಗಂಗಕ್ಕ ಬಿಂದಿಗೆಯೊಂದಿಗೆ ಅಂಗಳಕ್ಕಿಳಿದು ರಾಯರ ತಲೆಗೇ ತಣ್ಣೀರು ಸುರಿದಿದ್ದಳು. ಒಮ್ಮೆಲೆ ಸ್ತಬ್ಧರಾದ ರಾಯರಿಗೆ ಆಗಿದ್ದೇನು ಎಂಬುದು ತಿಳಿಯಲು ಒಂದೆರಡು ಕ್ಷಣಗಳು ಬೇಕಾದವು.

"ಹೆಂಗಸ್ರಿದ್ದ ಮನೆ ಹೇಳಿ ಮರ್ಯಾದಿ ಬಿಟ್ಟು ಮಾತಾಡಿರೆ ಗ್ರಾಚಾರ ಬಿಡ್ಸಾಕ್ತಿ ಮಾಬ್ಲ ನಿಂಗೆ. ತರ್ಲಾ ಇನ್ನೊಂದು ಕೊಡ ನೀರಾ... ಹೋಗ್ತ್ಯಾ ಇಲ್ಲಿಂದ?..." ಎಂದು ಗಂಗಕ್ಕ ದನಿಯೇರಿಸುತ್ತಿದ್ದಂತೆ ದುರ್ದಾನ ತೆಗೆದುಕೊಂಡವರಂತೆ ರಾಯರು ಅಲ್ಲಿಂದ ತೆರಳಿದ್ದರು. ಆ ಹೊತ್ತಿನಿಂದಲೇ ಇಲ್ಲಿನ ಗಡಿ ಪ್ರಕ್ಷುಬ್ಧವಾಗಿದ್ದು. ಏನಾದರಾಗಲಿ, ಗೊಬ್ಬರಗುಂಡಿಯನ್ನು ಅಲ್ಲಿಂದ ಎತ್ತಂಗಡಿ ಮಾಡಿಸಲೇ ಬೇಕು ಎಂದು ರಾಯರು ನಿರ್ಧರಿಸಿದ್ದರು. ಜೊತೆಗೆ ಗಂಗಕ್ಕನನ್ನು ಅವಮಾನಿಸುವ ಒಂದು ಅವಕಾಶವನ್ನೂ ಅವರು ಕೈಚೆಲ್ಲುತ್ತಿರಲಿಲ್ಲ. ಬಿಟ್ಟುಕೊಟ್ಟರೆ ಮೈಮೇಲೇ ಬರುತ್ತದೆ ಎಂಬ ಅರಿವಿದ್ದ ಗಂಗಕ್ಕ ಅನಿವಾರ್ಯವಾಗಿ ಹೋರಾಡುತ್ತಿದ್ದಳು. ಗಂಡನನ್ನು ಬಿಡಲಾರದ, ಗಂಗಾಭವಾನಿಯನ್ನು ದೂರಲಾರದ ಕುಸುಮಕ್ಕ ಎಲ್ಲದಕ್ಕೂ ಮೂಕಸಾಕ್ಷಿಯಂತಿದ್ದಳು.

★★★

ಕುಸುಮಕ್ಕ ಮಗಳು ಅಮೃತಳನ್ನು ಬಾಣಂತನಕ್ಕೆ ಕರೆಸಿಕೊಂಡಿದ್ದಳು. ದಿನದ ಜಂಜಾಟದ ನಡುವೆ ಮೊಮ್ಮಗುವಿನ ಆಗಮನ ಇಡೀ ಮನೆಗೆ ಜೀವಕಳೆಯನ್ನು ನೀಡಿತ್ತು. ಮೊದಲಾದರೆ ಬಾಣಂತಿಗೆ